## ಅಧ್ಯಾಯ ೬

# ಬ್ಯಾಂಕಿಂಗ್, ಸಹಕಾರ, ವಾಣಿಜ್ಯ ಮತ್ತು ವ್ಯಾಪಾರ

೨೦ನೆಯ ಶತಮಾನದ ಆರಂಭದ ದಶಕಗಳಲ್ಲಿ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯು ಅಸ್ತಿತ್ವಕ್ಕೆ ಬರುವ ಮೊದಲು, ಲೇವಾದೇವಿ ಪದ್ಧತಿಯು ಇತರೆಡೆಗಳಂತೆ ತಾಲೂಕಿನಲ್ಲೂ ರೂಢಿಯಲ್ಲಿತ್ತು. ತಾಲೂಕು ಕೇಂದ್ರ ನರಸೀಪುರವೂ ಸೇರಿದಂತೆ, ಬನ್ನೂರು, ಸೋಸಲೆ, ಚಿದರಹಳ್ಳಿ, ತಲಕಾಡು, ಮೂಗೂರು, ತಡಿ ಮಾಲಂಗಿ, ವಾಟಾಳು ಮುಂತಾದ ಊರುಗಳಲ್ಲಿದ್ದ ಸಾಹುಕಾರರು, ಜಮೀನ್ದಾರರು ಹಾಗೂ ವರ್ತಕರು ಲೇವಾದೇವಿಯಲ್ಲಿ ತೊಡಗಿದ್ದು, ಧರ್ಮಬಡ್ಡಿಗೆ ಅಲ್ಪಮೊತ್ತವನ್ನು ಅಲ್ಪಾವಧಿಗೆ ಸಾಲ ನೀಡುತ್ತಿದ್ದರೂ, ಸಾಲದ ಮೊತ್ತ ದೊಡ್ಡದಾದಲ್ಲಿ ಅದಕ್ಕೆ ಒಡವೆ, ಜಮೀನು ಮುಂತಾದವನ್ನು ಅಡಮಾನವಿಟ್ಟುಕೊಳ್ಳುತ್ತಿದ್ದರು. ಆಗಾಗ ಎದುರಾಗುತ್ತಿದ್ದ ಅತಿವೃಷ್ಟಿ ಅನಾವೃಷ್ಟಿಗಳಿಂದಾಗಿ ಸಂಕಷ್ಟ ಪರಿಸ್ಥಿತಿ ಉಂಟಾಗಿ ಸಾಲದ ಸುಳಿಯಲ್ಲಿ ಸಿಲುಕಿ ಬಡ್ಡಿ ಚಕ್ರಬಡ್ಡಿಗಳ ವಿಷವರ್ತುಲದಲ್ಲಿ ರೈತರು ತೊಳಲಾಡಬೇಕಾಗುತ್ತಿತ್ತು. ಇದು ಕೆಲವೊಮ್ಮೆ ಪಡೆದ ಹಣ ಹಿಂತಿರುಗಿಸಲಾಗದ ಕೆಳವರ್ಗದ ಸಾಲಗಾರರನ್ನು ಜೀತದಾಳುಗಳಾಗುವಂತೆ ಮಾಡುತ್ತಿತ್ತು. ವ್ಯಾಪಾರಿಗಳು ಕುಶಲಕರ್ಮಿಗಳ ಸಂಘಗಳು, ದೇವಾಲಯಗಳು ಹಣವನ್ನು ಠೇವಣಿಯನ್ನಾಗಿ ಇಟ್ಟುಕೊಳ್ಳುವುದರ ಜೊತೆಗೆ ನಂಬಲರ್ಹರಿಗೆ ಸಾಲ ನೀಡುವ ಮೂಲಕ ಬಂದ ಬಡ್ಡಿಯನ್ನು ದೇವರ ಪೂಜೆ, ಧರ್ಮಸತ್ರ ನಿರ್ವಹಣೆ ಮುಂತಾದ ಧರ್ಮಕಾರ್ಯಗಳಿಗೆ ವಿನಿಯೋಗಿಸುತ್ತಿದ್ದ ಅಂಶವೂ ತಾಲೂಕಿನ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಬನ್ನೂರಿನ ೧೧೩೫ರ ಶಾಸನದಿಂದ ಗದ್ಯಾಣಕ್ಕೆ ತಿಂಗಳಿಗೆ ಒಂದು ಹಾಗ ಬಡ್ಡಿ ಬರುತ್ತಿದ್ದು, ಆ ದಿನಗಳಲ್ಲಿ ಇದ್ದ ಶೇ. ೨೦ ವಾರ್ಷಿಕ ಬಡ್ಡಿದರವನ್ನು ಇದು ಸೂಚಿಸುತ್ತದೆ.

ಸುಮಾರು ೧೯೦೦ರ ವೇಳೆಗೆ ಶೇ. ೧೨ ರಿಂದ ಶೇ. ೩೦ರವರೆಗೆ ಬಡ್ಡಿಯನ್ನು ವಿಧಿಸಲಾಗುತ್ತಿದ್ದು, ಸಾಲಿಗರು ಲೇವಾದೇವಿದಾರನ ಕಪಿಮುಷ್ಟಿಯಲ್ಲಿ ಬಳಲುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದನ್ನು ಮೊದಲೇ ಮನಗಂಡಿದ್ದ ಸರ್ಕಾರ ಕಮೀಷನರುಗಳ ಆಡಳಿತಾವಧಿಯಲ್ಲಿ ತಕಾವಿ ಸಾಲ ಕಾಯ್ದೆ (೧೮೭೬), ಡೆಕ್ಕನ್ ರೈತ ಪರಿಹಾರ ಕಾಯ್ದೆ (೧೮೭೯) ಭೂ ಸುಧಾರಣಾ ಸಾಲ ಕಾಯ್ದೆ (೧೮೮೩) ರೈತ ಸಾಲ



ಕಾಯ್ದೆ (೧೮೮೪) ಹಾಗೂ ಭೂಅಭಿವೃದ್ಧಿ ಸಾಲ ಕಾಯ್ದೆ (೧೮೯೦)ಗಳನ್ನು ಜಾರಿಗೊಳಿಸಿತಾದರೂ ಇವು ತಾಲೂಕಿನಲ್ಲಿ ಬೀರಿದ ಪ್ರಭಾವ ಅಷ್ಟಕ್ಕಷ್ಟೇ. ಆಗ ತಾಲೂಕು ಮಟ್ಟದಲ್ಲಿ ರೈತರಿಗೆ ರೂ.೨೫೦ರವರೆಗೆ ತಕಾವಿ ಸಾಲ ನೀಡಲು ಅಧಿಕಾರವಿದ್ದು, ಮರು ಪಾವತಿಸಲು ಒಂದರಿಂದ ಹತ್ತು ವರ್ಷ ಕಾಲಾವಕಾಶವನ್ನು ನೀಡಲಾಗುತ್ತಿತ್ತು. ಅದೇ ಭೂಅಭಿವೃದ್ಧಿ ಸಾಲವನ್ನು ಸಾಲ ಉದ್ದೇಶವನ್ನಾಧರಿಸಿ ಮರುಪಾವತಿ ಅವಧಿಯನ್ನು ೧೦ ರಿಂದ ೩೦ ವರ್ಷದವರೆಗೆ ನೀಡಲಾಗುತ್ತಿತ್ತು. ಆದರೆ ಈ ಸಾಲಗಳನ್ನು ನರಸೀಪುರ ತಾಲೂಕಿನಲ್ಲಿ ಪಡೆದವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರು, ಸಂಸ್ಥಾನದಲ್ಲಿ ೧೯೨೩–೩೯ರ ಅವಧಿಯಲ್ಲಿ ಲೇವಾದೇವಿದಾರರ ಚಟುವಟಿಕೆಗಳನ್ನು ನಿಯಂತ್ರಿಸುವ ನಾಲ್ಕಾರು ಕಾಯ್ದೆಗಳು ಜಾರಿಗೆ ಬಂದು ಸಾಲಗಾರರು ಉಸಿರಾಡುವಂತಾಯಿತು. ಬಡ್ಡಿದರವನ್ನು ಆಧಾರ ಸಾಲಕ್ಕೆ ಶೇ.೯ ಹಾಗೂ ಆಧಾರರಹಿತ ಸಾಲಕ್ಕೆ ಶೇ ೧೨ಕ್ಕೆ ನಿಗದಿಪಡಿಸಲಾಯಿತು. ಈ ಕಾಯ್ದೆಗಳನ್ನು ಮುರಿದ ಲೇವಾದೇವಿದಾರರು ಶಿಕ್ಷಾರ್ಹರಾಗುತ್ತಿದ್ದರು.

ಏಕೀಕರಣದ ನಂತರ ಅಸ್ತಿತ್ವಕ್ಕೆ ಬಂದ ಕರ್ನಾಟಕ ಲೇವಾದೇವಿದಾರರ ಕಾಯ್ದೆ (೧೯೬೧) ಹಾಗೂ ಕರ್ನಾಟಕ ಗಿರವಿದಾರರ ಕಾಯ್ದೆ (೧೯೬೧) ಗಳು ಕ್ರಮವಾಗಿ ೧೯೬೨ ಹಾಗೂ ೧೯೬೬ರಲ್ಲಿ ಜಾರಿಗೊಂಡವು. ಇವು ಸಾಲಗಾರರಿಗೆ ರಕ್ಷಣೆ ನೀಡಿದವಾದರೂ, ಒತ್ತೆ ಸಾಲಕ್ಕೆ ಶೇ.೧೮ ಹಾಗೂ ಒತ್ತೆರಹಿತ ಸಾಲಕ್ಕೆ ಶೇ. ೨೧ ಬಡ್ಡಿದರವನ್ನು ನಿಗದಿಪಡಿಸಿದ್ದವು. ಮುಂದೆ ೧೯೭೬ರಲ್ಲಿ ಜಾರಿಗೆ ಬಂದ ಕರ್ನಾಟಕ ಋಣ ಪರಿಹಾರ ಕಾಯ್ದೆಯ ಪ್ರಕಾರ ಜೀತಪದ್ಧತಿಯಿಂದ ಮುಕ್ತರಾದ ಜೀತದಾಳುಗಳು ಹಾಗೂ ರೂ. ೨,೪೦೦ ಕ್ಕಿಂತ ಕಡಿಮೆ ವಾರ್ಷಿಕ ಆದಾಯವನ್ನು (ಇದನ್ನು ೧೯೭೯ರಲ್ಲಿ ೪,೮೦೦ ರೂ.ಗಳಿಗೆ ನಿಗದಿಪಡಿಸಲಾಯಿತು) ಹೊಂದಿರುವ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದ ಸಾಲಗಾರರ ಅಸಲು ಬಡ್ಡಿಗಳನ್ನು ಮನ್ನಾ ಮಾಡಿದ್ದು, ಶತಮಾನಗಳಿಂದ ಬಳಲುತ್ತಿದ್ದ ದುರ್ಬಲವರ್ಗದವರಿಗೆ ವರವಾಯಿತು. ಆದರೆ ಈ ಪರಿಹಾರ, ಕೇಂದ್ರ–ರಾಜ್ಯ ಸರ್ಕಾರ ಹಾಗೂ ಸಹಕಾರಿ ಸಂಸ್ಥೆಗಳಿಂದ ಪಡೆದ ಸಾಲಗಳಿಗೆ ಅನ್ವಯಿಸುತ್ತಿರಲಿಲ್ಲ. ಈ ಕಾಯ್ದೆ ಜಾರಿಗೊಂಡಂದಿನಿಂದ ೧೯೮೬ರವರೆಗೆ ಜಿಲ್ಲೆಯಲ್ಲಿ ಸ್ವೀಕರಿಸಲ್ಪಟ್ಟಿದ್ದ ೨೮,೨೩೩ ಋಣ ಪರಿಹಾರ ಅರ್ಜಿಗಳಲ್ಲಿ ನರಸೀಪುರ ತಾಲೂಕಿನಿಂದ ೮,೧೪೦ ಅರ್ಜಿಗಳು ಸಲ್ಲಿಸಲ್ಪಟ್ಟಿದ್ದು ಗಮನಾರ್ಹವಾಗಿತ್ತು. ಅದರಂತೆ ತಾಲೂಕಿನಲ್ಲಿ ಗುರುತಿಸಲ್ಪಟ್ಟಿದ್ದ ೨,೩೯೭ ಜಿತದಾಳುಗಳಲ್ಲಿ ೧೨೫ ಜೀತದಾಳುಗಳನ್ನು ಋಣಮುಕ್ತರನ್ನಾಗಿಸಿ ಅವರ ಪುನರ್ವಸತಿಗಾಗಿ ಕ್ರಮಗಳನ್ನು ಕೈಗೊಳ್ಳಲಾಯಿತು. ಆರಂಭದಲ್ಲಿ ಲೇವಾದೇವಿದಾರರು ವಿಧಿಸಬಹುದಾದ ಬಡ್ಡಿದರವನ್ನು ೧೯೭೨ರಲ್ಲಿ ಆಧಾರಿತ ಸಾಲಕ್ಕೆ ಶೇ.೨೧ ಹಾಗೂ ಆಧಾರರಹಿತ ಸಾಲಕ್ಕೆ ಶೇ.೨೩ ಕ್ಕೂ ನಿಗದಿಪಡಿಸಿದ್ದ ಸರ್ಕಾರ ಅದನ್ನು ೨೦೦೩ರಲ್ಲಿ ಪುನರ್‌ಪರಿಷ್ಕರಿಸಿ ಬಡ್ಡಿದರವನ್ನು ಕ್ರಮವಾಗಿ ಶೇ.೧೪ ಹಾಗೂ ಶೇ.೧೬ ಎಂದು ನಿಗದಿಪಡಿಸಿದೆ. ಆದರೂ ಖಾಸಗಿ ಲೇವಾದೇವಿದಾರರು, ಸಾಹುಕಾರರು, ವ್ಯಾಪಾರಿಗಳು, ಪರವಾನಗಿ ಇಲ್ಲದೇ ರಹಸ್ಯವಾಗಿ ಸಾಲ ನೀಡಿ ದುಬಾರಿ ಬಡ್ಡಿ ವಿಧಿಸುತ್ತಿದ್ದು, ಚೀಟಿ ವ್ಯವಹಾರದಲ್ಲಿ ಸಾಕಷ್ಟು ಮೋಸ ವಂಚನೆ ಪ್ರಕರಣೆಗಳು ವರದಿಯಾಗಿವೆ.

ಹಣಕಾಸು ವ್ಯವಹಾರದಲ್ಲಿ ಖಾಸಗಿ ಲೇವಾದೇವಿಗಾರರು ಗಿರವಿದಾರರ ಜೊತೆಗೆ ಬ್ಯಾಂಕೇತರ ಹಣಕಾಸು ಸಂಸ್ಥೆ ಹಾಗೂ ಚಿಟ್‌ಫಂಡ್ ಸಂಸ್ಥೆಗಳು ತಾಲೂಕು ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿವೆ. ೧೯೩೨ ಹಾಗೂ ೧೯೫೬ರ ಕಾಯ್ದೆಯನ್ವಯ ನೋಂದಾಯಿತಗೊಳ್ಳುವ ಈ ಹಣಕಾಸು ಸಂಸ್ಥೆಗಳು ಸಣ್ಣ ಪ್ರಮಾಣದ ವ್ಯಾಪಾರಿಗಳೂ ಸೇರಿದಂತೆ ಸಮಾಜದ ವಿವಿಧ ವರ್ಗದವರಿಗೆ ಸಾಲ ನೀಡುವುದರ ಜೊತೆಗೆ ಠೇವಣಿಯನ್ನೂ ಸಂಗ್ರಹಿಸುತ್ತವೆ. ತಾಲೂಕಿನಲ್ಲಿ ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್ನಿನ ಶಾಖೆಯೂ ಸೇರಿದಂತೆ ಹಲವಾರು ಖಾಸಗಿ ಹಣಕಾಸು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಸಹಕಾರ ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟಿವೆ.

**ವಾಣಿಜ್ಯ ಬ್ಯಾಂಕುಗಳು :** ಆಧುನಿಕ ಯುಗದಲ್ಲಿ ಬ್ಯಾಂಕಿಂಗ್ ಸೇವೆ ಸಮಾಜೋ–ಆರ್ಥಿಕ ರಂಗದಲ್ಲಿ ಹಿರಿದಾದ ಪಾತ್ರ ವಹಿಸುತ್ತಿದೆ. ಠೇವಣಿ ಸಂಗ್ರಹ ಹಾಗೂ ವಿವಿಧ ಕ್ಷೇತ್ರದ ಉದ್ಯಮಿಗಳಿಗೆ ಸಾಲ ನೀಡುವ ಮೂಲಕ ಸರ್ಕಾರದ ೨೦ ಅಂಶ ಕಾರ್ಯಕ್ರಮ ಹಾಗೂ ಉತ್ಪಾದನಾ ಯೋಜನೆಗಳ ಅನುಷ್ಟಾನಕ್ಕೆ ವಿವಿಧ ಬಡ್ಡಿದರ ಸಾಲ ಯೋಜನೆಯ ಮೂಲಕ ಆರ್ಥಿಕ ಪ್ರಗತಿಯಲ್ಲಿ ಕೈಜೋಡಿಸುತ್ತಿವೆ. ಜಿಲ್ಲೆಯಲ್ಲಿ ವಾಣಿಜ್ಯ ಬ್ಯಾಂಕಿನ ಇತಿಹಾಸವನ್ನು ೧೮೭೪ರಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು, ನೆರೆಯ ನಂಜನಗೂಡಿನಲ್ಲಿ ಬಹು ಹಿಂದೆಯೇ ಶ್ರೀಕಂಠೇಶ್ವರಸ್ವಾಮಿ ಬ್ಯಾಂಕ್ (೧೮೮೫) ಶ್ರೀನಿವಾಸ ಬ್ಯಾಂಕ್ (೧೮೯೩) ಹಾಗೂ ಶ್ರೀ ನಂಜುಂಡೇಶ್ವರ ಬ್ಯಾಂಕು (೧೯೦೮) ಗಳು ಸ್ಥಾಪನೆಗೊಂಡಿದ್ದವು. ಏತನ್ಮಧ್ಯೆ ಸರ್ಕಾರವು ೧೮೭೦ರಷ್ಟು ಹಿಂದೆಯೇ ಉಳಿತಾಯ ಮನೋಭಾವವನ್ನು ಬೆಳಸುವ ಸಲುವಾಗಿ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಉಳಿತಾಯ ಬ್ಯಾಂಕುಗಳನ್ನು ಸ್ಥಾಪಿಸಿತ್ತು. ಇದನ್ನು ಗ್ರಾಮೀಣ ಮಟ್ಟಕ್ಕೂ ವಿಸ್ತರಿಸಲು ಮುಂದಾದ ಸರ್ಕಾರ ಗ್ರಾಮೀಣ ಸೇವಿಂಗ್ಸ್ ಬ್ಯಾಂಕುಗಳನ್ನು ೧೯೧೫ರಲ್ಲಿ ಆರಂಭಿಸಿತು. ಆದರೆ ೧೯೨೨–೨೩ರಲ್ಲಿ ಇವು ಮುಚ್ಚಲ್ಪಟ್ಟವು. ನರಸೀಪುರ ತಾಲೂಕಿನಲ್ಲಿ ವಾಣಿಜ್ಯ ಬ್ಯಾಂಕಿಂಗ್ ಶಕೆ ಆರಂಭಗೊಂಡದ್ದು ೧೯೫೦ರ ದಶಕದಲ್ಲೇ.

ಏತನ್ಮಧ್ಯೆ ರೈತರನ್ನು ಲೇವಾದೇವಿಗಾರರಿಂದ ರಕ್ಷಿಸುವ ಸಲುವಾಗಿ ೧೯ನೆಯ ಶತಮಾನದ ಕೊನೆಯ ದಶಕದಲ್ಲಿ ಕೃಷಿ ಸಹಕಾರಿ ಬ್ಯಾಂಕ್‌ಗಳ ಸ್ಥಾಪನೆಗೆ ಸರ್ಕಾರ ಮುಂದಾಯಿತು. ಭೂ ಮಾಲೀಕರನ್ನು ಸದಸ್ಯರನ್ನಾಗಿ ಹೊಂದಿರುತ್ತಿದ್ದ ಈ ಬ್ಯಾಂಕ್ ಸಂಗ್ರಹಿಸಿದ್ದ ಠೇವಣಿಯಲ್ಲಿ ಕೃಷಿ ಕಾರ್ಯಗಳಿಗೆ ಸಾಲ ನೀಡುತ್ತಿತ್ತು. ಇಂತಹ ಒಂದು ಬ್ಯಾಂಕ್ ನೆರೆಯ ನಂಜನಗೂಡಿನಲ್ಲಿ, ಜಿಲ್ಲೆಯ ಎರಡನೆಯ ಕೃಷಿ ಬ್ಯಾಂಕಾಗಿ (ಪಾಲಹಳ್ಳಿ ಮೊದಲನೆಯದು–(೧೮೯೪) ೧೮೯೭ರಲ್ಲಿ ಸ್ಥಾಪಿಸಲ್ಪಟ್ಟಿತು. ಆದರೆ ಇಂತಹ ಕೃಷಿ ಬ್ಯಾಂಕ್‌ಗಳು ೧೯೧೭ರ ವೇಳೆಗೆ ಮುಳುಗಿ ಹೋದವು. ಈ ನಡುವೆ ೧೯೧೩ರಲ್ಲಿ ಆರಂಭಗೊಂಡ ಮೈಸೂರು ಬ್ಯಾಂಕ್, ಇತರ ಬ್ಯಾಂಕ್‌ಗಳ ಆಗಮನದ(೧೯೩೬)ವರೆಗೆ ಸಂಸ್ಥಾನದಲ್ಲಿ ಬ್ಯಾಂಕಿಂಗ್ ಸೇವೆ ನೀಡುತ್ತಿದ್ದ ಏಕೈಕ ಸರ್ಕಾರಿ ಬ್ಯಾಂಕಾಗಿತ್ತು. ಪಂಚವಾರ್ಷಿಕ ಯೋಜನೆಗಳ ಅನುಷ್ಠಾನದ ಭಾಗವಾಗಿ ಗ್ರಾಮೀಣ ಪ್ರದೇಶದಲ್ಲಿ ಠೇವಣಿಗಳ ಸಂಗ್ರಹಣೆ, ಕೃಷಿ ಮತ್ತಿತರ ಕ್ಷೇತ್ರಗಳ ಅಭಿವೃದ್ಧಿ, ಹಾಗೂ ಸಾಲ ವಿತರಣೆಗಾಗಿ



ಭಾರತೀಯ ರಿಸರ್ವ್ ಬ್ಯಾಂಕ್ ಗ್ರಾಮೀಣ ಭಾಗದಲ್ಲಿ ಶಾಖೆಗಳನ್ನು ತೆರೆಯಲು ವಾಣಿಜ್ಯ ಬ್ಯಾಂಕ್‌ಗಳಿಗೆ ಹಸಿರು ನಿಶಾನೆ ತೋರಿಸಿದ ಹಿನ್ನೆಲೆಯಲ್ಲಿ ಕ್ರಮೇಣ ತಾಲೂಕಿನಲ್ಲೂ ವೈಶ್ಯ ಬ್ಯಾಂಕ್, ಮೈಸೂರು ಬ್ಯಾಂಕ್, ಕೆನರಾ ಬ್ಯಾಂಕ್, ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮುಂತಾದ ವಾಣಿಜ್ಯ ಬ್ಯಾಂಕ್‌ಗಳು ಶಾಖೆಯನ್ನು ಆರಂಭಿಸಿದವು. ಮುಂದೆ ೧೯೬೯ರಲ್ಲಿ ೧೪ ಪ್ರಮುಖ ವಾಣಿಜ್ಯ ಬ್ಯಾಂಕ್‌ಗಳು ರಾಷ್ಟ್ರೀಕರಣಗೊಂಡುದು ಒಂದು ಮೈಲಿಗಲ್ಲಾಗಿ ಪರಿಣಮಿಸಿತು. ಅದರ ಬೆನ್ನಲ್ಲೇ ಆರಂಭಗೊಂಡ ಲೀಡ್ ಬ್ಯಾಂಕ್ ಯೋಜನೆಯಂತೆ ಮೈಸೂರು ಬ್ಯಾಂಕ್‌ಗೆ ಜಿಲ್ಲೆಯ ಮಾರ್ಗದರ್ಶಿ (ಲೀಡ್) ಬ್ಯಾಂಕ್ ಜವಾಬ್ದಾರಿಯನ್ನು ೧೯೬೯ರಲ್ಲಿ ವಹಿಸಲಾಯಿತು. ಇದರ ಸಾಮ್ಯದಲ್ಲಿ ಜಿಲ್ಲೆಯ ಗ್ರಾಮೀಣಾಭಿವೃದ್ಧಿಗಾಗಿ ಕಾವೇರಿ ಗ್ರಾಮೀಣ ಬ್ಯಾಂಕ್ ಜಿಲ್ಲೆಯಲ್ಲಿ ಆರಂಭಗೊಂಡ (೧೯೭೬) ನಂತರ ವಿವಿಧ ವಾಣಿಜ್ಯ ಬ್ಯಾಂಕ್‌ಗಳ ಶಾಖೆಗಳು ಗ್ರಾಮೀಣ, ನಗರ ಹಾಗೂ ಅರೆನಗರ ಪ್ರದೇಶಗಳಲ್ಲಿ ಆರಂಭಗೊಂಡವು. ತತ್ಪರಿಣಾಮವಾಗಿ ಪ್ರತಿ ೧೪,೦೦೦ ಜನರಿಗೆ ಒಂದು ಶಾಖಾ ಬ್ಯಾಂಕ್ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುವಂತಾಯಿತು. ಆದ್ಯತಾ ವಲಯದ ಸಾಲ, ವ್ಯತ್ಯಸ್ಥ ಬಡ್ಡಿಸಾಲ, ಸಾಮಾಜಿಕ ಬ್ಯಾಂಕಿಂಗ್, ಅಂತ್ಯೋದಯ, ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ ಮುಂತಾದ ೨೦ ಅಂಶದ ಕಾರ್ಯಕ್ರಮಗಳಿಗೆ ಬ್ಯಾಂಕ್‌ಗಳು ನೆರವಾದವು. ಮುಂದೆ ೧೯೮೦ರಲ್ಲಿ ರಾಷ್ಟ್ರಮಟ್ಟದಲ್ಲಿ ಮತ್ತೆ ಆರು ಬ್ಯಾಂಕುಗಳು ರಾಷ್ಟ್ರೀಕರಣಗೊಂಡುದು ಮಹತ್ವದ್ದಾಗಿತ್ತು. ಗ್ರಾಮೀಣ ಭಾಗದಲ್ಲಿ ಠೇವಣಿ ಶೇಖರಣೆಗಾಗಿ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಆರಂಭಿಸಿದ ಕಾವೇರಿ ಭಾಗ್ಯನಿಧಿ ಯೋಜನೆಯು ತಾಲೂಕಿನಲ್ಲಿ ದುರ್ಬಲವರ್ಗದ ಜನರಿಗೆ ಸರಳವಾಗಿ ಸಾಲ ಲಭಿಸಬೇಕೆಂಬ ಉದ್ದೇಶದಿಂದ ರೂ.ಐದು ಸಾವಿರದವರೆಗಿನ ಮೊತ್ತವನ್ನು ಶೇ.೧೨.೫ ಬಡ್ಡಿದರದಲ್ಲಿ ಸಾಲವಾಗಿ ನೀಡುವ ಸಾರ್ವಜನಿಕ ಸಾಲ ಮೇಳಗಳನ್ನು ೧೯೮೬ ಹಾಗೂ ೧೯೮೭ರಲ್ಲಿ ಹಮ್ಮಿಕೊಳ್ಳಲಾಗಿತ್ತು. ತಾಲೂಕಿನಲ್ಲಿ ೧೯೮೬ರ ವೇಳೆಗೆ ೧೧ ಶಾಖಾ ಬ್ಯಾಂಕ್‌ಗಳು ಹಾಗೂ ಏಳು ಗ್ರಾಮೀಣ ಬ್ಯಾಂಕ್ ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದವು. ಇದೇ ಪರಿಸ್ಥಿತಿ ೧೯೯೨ರಲ್ಲೂ ಮುಂದುವರಿದಿತ್ತು. ೧೯೯೯ರವರೆಗೆ ವಾಣಿಜ್ಯ ಬ್ಯಾಂಕ್ ಶಾಖೆಗಳ ಸಂಖ್ಯೆಯಲ್ಲಿ ಯಾವುದೇ ಬದಲಾವಣೆಯಾಗಿರದೇ ಗ್ರಾಮೀಣ ಬ್ಯಾಂಕ್‌ಗಳ ಸಂಖ್ಯೆ ಎಂಟಕ್ಕೇರಿತ್ತು. ೨೦೦೮ರ ಮಾರ್ಚ್ ಅಂತ್ಯಕ್ಕೆ ತಾಲೂಕಿನ ನರಸೀಪುರ, ಬನ್ನೂರು, ತಲಕಾಡು, ಮೂಗೂರು ಮುಂತಾದೆಡೆಗಳಲ್ಲಿದ್ದ ೧೦ ವಾಣಿಜ್ಯ ಬ್ಯಾಂಕ್ ಶಾಖೆ ಹಾಗೂ ಒಂಭತ್ತು ಗ್ರಾಮೀಣ ಬ್ಯಾಂಕುಗಳು ಒಟ್ಟು ೧೩,೩೭೭ ಲಕ್ಷ ರೂ. ಠೇವಣಿಯನ್ನು ಹೊಂದಿದ್ದು, ೧೩,೦೨೧ ಲಕ್ಷ ರೂ. (ಶೇ. ೯೭.೩೪)ಗಳನ್ನು ಸಾಲವಾಗಿ ನೀಡಿದ್ದವು. ಪ್ರಸ್ತುತ ಐಸಿಐಸಿಐ ಶಾಖೆಯೂ ನರಸೀಪುರದಲ್ಲಿದ್ದು, ಎ.ಟಿ.ಎಂ. ಘಟಕಗಳೂ ಕಾರ್ಯನಿರ್ವಹಿಸುತ್ತಿವೆ.

**ಜೀವವಿಮೆ :** ಸಂಸ್ಥಾನದಲ್ಲಿ ೧೮೯೧ರಲ್ಲಿ ಆರಂಭಗೊಂಡ ಇದು ಆರಂಭದಲ್ಲಿ ಸರ್ಕಾರಿ ನೌಕರರಿಗಷ್ಟೇ ಸೀಮಿತವಾಗಿದ್ದು, ಇದನ್ನು ೧೯೧೬ರಲ್ಲಿ ಸಾರ್ವಜನಿಕರಿಗೂ ವಿಸ್ತರಿಸಲಾಯಿತು. ಜೀವವಿಮೆ ಚಟುವಟಿಕೆಯು ೧೯೫೬ರಲ್ಲಿ ರಾಷ್ಟ್ರೀಕರಣಗೊಂಡ

ನಂತರ ಜೀವವಿಮೆ ಹಾಗೂ ಸಾಮಾನ್ಯ ವಿಮೆಯಲ್ಲಿ ಸಾಕಷ್ಟು ಪ್ರಗತಿಯಾಯಿತು. ತತ್ಪರಿಣಾಮವಾಗಿ ಭಾರತೀಯ ಜೀವವಿಮಾ ನಿಗಮದ ಶಾಖಾ ಕಚೇರಿಯು ಕೊಳ್ಳೇಗಾಲದಲ್ಲಿದ್ದು, ಇತ್ತೀಚೆಗೆ ತಾಲೂಕಿನಲ್ಲಿ ಜೀವ ವಿಮಾ ನಿಗಮದ ಸ್ಯಾಟಲೈಟ್ ಕಚೇರಿಯು ನರಸೀಪುರದಲ್ಲಿ ಕಾರ್ಯನಿರ್ವಹಿಸಲಾರಂಭಿಸಿದೆ. ಅಲ್ಲದೇ ಅಂಚೆ ಜೀವವಿಮಾ ಸೌಲಭ್ಯವೂ ತಾಲೂಕಿನ ಅಂಚೆ ಇಲಾಖೆಗಳಲ್ಲಿ ಲಭ್ಯವಿದೆ.

**ಸರ್ಕಾರಿ ವಿಮೆ:** ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ರಾಜ್ಯ ಸರ್ಕಾರಿ ನೌಕರರಿಗೇ ಸೀಮಿತವಾಗಿದ್ದು, ಸರ್ಕಾರಿ ನೌಕರರ ಜೀವವಿಮೆ, ವಾಹನ ವಿಮೆಗಳನ್ನು ನಿರ್ವಹಿಸುತ್ತಿದ್ದು, ತಾಲೂಕಿನ ಮೂರನೆಯ ಹಾಗೂ ನಾಲ್ಕನೆಯ ದರ್ಜೆಯ ನೌಕರರ ವಿಮಾಖಾತೆಗಳನ್ನು ಜಿಲ್ಲಾ ವಿಮಾ ಕಚೇರಿಯು ೧೯೮೨ರ ವರೆಗೆ ನಿರ್ವಹಿಸಿದರೆ, ಪತ್ರಾಂಕಿತ ಅಧಿಕಾರಿಗಳ ಖಾತೆಯನ್ನು ವಿಭಾಗೀಯ ವಿಮಾ ಕಚೇರಿಯು ನಿರ್ವಹಿಸುತ್ತಿತ್ತು. ಇತ್ತೀಚೆಗೆ ವಿಭಾಗೀಯ ಕಚೇರಿಯ ರದ್ದತಿಯಿಂದಾಗಿ ಪತ್ರಾಂಕಿತ ಅಧಿಕಾರಿಗಳೂ ಸೇರಿದಂತೆ ಎಲ್ಲಾ ಸರ್ಕಾರಿ ನೌಕರರ ಖಾತೆಯನ್ನು ಜಿಲ್ಲಾ ವಿಮಾ ಕಚೇರಿಯೇ ನಿರ್ವಹಿಸುತ್ತದೆ.

ರಾಷ್ಟ್ರೀಯ ಉಳಿತಾಯ ಸಂಸ್ಥೆಯು (೧೯೫೭) ಆರಂಭವಾಗುವುದಕ್ಕೆ ಮೊದಲೇ ೧೮೭೦ರಷ್ಟು ಹಿಂದೆಯೇ ಉಳಿತಾಯ ಬ್ಯಾಂಕ್‌ಗಳು ತಾಲೂಕು ಮಟ್ಟದಲ್ಲಿ ಆರಂಭಗೊಂಡವು. ಮುಂದೆ ೧೮೮೨ರಲ್ಲಿ ಅಂಚೆಕಚೇರಿಗಳಲ್ಲಿ ಉಳಿತಾಯ ಖಾತೆಯನ್ನು ಗ್ರಾಹಕರಿಗಾಗಿ ಆರಂಭಿಸಲಾಯಿತು. ಆರಂಭದಲ್ಲಿ ಕನಿಷ್ಟ ನಾಲ್ಕಾಣೆಯಿಂದ ಗರಿಷ್ಟ ೫.೦೦ ರೂ.ಗಳನ್ನು ಠೇವಣಿಯಾಗಿ ಇಡಬಹುದಾಗಿದ್ದು, ವಾರ್ಷಿಕ ಬಡ್ಡಿ ಶೇ. ೩ ೩/೪ ಇದ್ದು, ೧೮೮೯ರಲ್ಲಿ ಗರಿಷ್ಟ ಮೊತ್ತವನ್ನು ಎರಡು ರೂ.ಗಳಿಗಿಳಿಸಲಾಯಿತು. ಪ್ರಸ್ತುತ ಅಂಚೆ ಇಲಾಖೆಯು ಉಳಿತಾಯ ಖಾತೆ, ಸಿ.ಟಿ.ಡಿ. ಆರ್.ಡಿ. ಎನ್.ಎಸ್.ಸಿ., ಇಂದಿರಾವಿಕಾಸ್, ಎನ್.ಎಸ್.ಎಸ್., ಎಂ.ಐ.ಎಸ್. ಮುಂತಾದ ಯೋಜನಾ ಸೌಲಭ್ಯಗಳನ್ನು ಗ್ರಾಹಕರಿಗೆ ನೀಡುತ್ತಿದೆ.

**ನಾಣ್ಯಪದ್ಧತಿ :** ತಾಲೂಕಿನಲ್ಲಿ ಲಭಿಸಿರುವ ವಿವಿಧ ರಾಜಮನೆತನಕ್ಕೆ ಸೇರಿದ ಶಾಸನಗಳಲ್ಲಿ ಗದ್ಯಾಣ, ವರಾಹ, ಹಾಗ, ಹಣ, ದ್ರಮ್ಮ, ಮುಂತಾದ ಚಿನ್ನ ಬೆಳ್ಳಿ ತಾಮ್ರದ ನಾಣ್ಯಗಳ ಉಲ್ಲೇಖವಿದೆ. ಆದರೆ ತಲಕಾಡಿನ ಗಂಗರ ಆಳ್ವಿಕೆಗೆ ಸೇರಿದ ಈ ಪ್ರದೇಶದಲ್ಲಿ ಅವರ ನಾಣ್ಯಗಳು ಲಭಿಸಿಲ್ಲ. ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಚಿನ್ನದ ನಾಣ್ಯಗಳಲ್ಲಿ ತಲಕಾಡುಗೊಂಡ ಎಂಬ ಬಿರುದಿದ್ದ ಬಗ್ಗೆ ಮಾಹಿತಿ ಲಭ್ಯವಿದ್ದು, ಒಂದೆರಡು ನಾಣ್ಯಗಳೂ ಬೇರೆಡೆ ಲಭಿಸಿವೆ. ಹೈದರ್–ಟಿಪ್ಪು ಕಾಲದಲ್ಲಿ ವಿವಿಧ ಮೌಲ್ಯದ ಚಿನ್ನ–ಬೆಳ್ಳಿಯ ಅಹಮದಿ, ಹೈದರಿ, ಇಮಾನಿ, ಅಬೀದಿ ಬಾದೂರಿ ಪಣ ಎಂಬ ನಾಣ್ಯಗಳನ್ನು ಟಂಕಿಸಿ ಚಲಾವಣೆಗೆ ಬಿಡಲಾಗಿತ್ತು. ಅಲ್ಲದೇ ೧೭೮೨ರಲ್ಲಿ ೧/೪, ೧/೨ ಹಾಗೂ ಒಂದು ಆಣೆ(೧೨ ಕಾಸು)ಯ ನಾಣ್ಯಗಳನ್ನು ಬಳಕೆಗೆ ತರಲಾಯಿತು. ಮುಂದೆ ಸಂಸ್ಥಾನವು ಬ್ರಿಟಿಷ್ ಕಮೀಷನರುಗಳ ಆಡಳಿತಕ್ಕೊಳಪಟ್ಟ ನಂತರ ಭಾರತೀಯ ನಾಣ್ಯ ಕಾಯ್ದೆ (೧೮೭೦)ಯನ್ನು ಸಂಸ್ಥಾನಕ್ಕೂ ವಿಸ್ತರಿಸಲಾಯಿತು. ಇದರೊಂದಿಗೆ ಬ್ರಿಟಿಷ್ ನಾಣ್ಯಗಳು ಸಂಸ್ಥಾನದ ಅಧೀಕೃತ ನಾಣ್ಯಗಳಾದವು. ಸಂಸ್ಥಾನದ ಆಡಳಿತವು ೧೮೮೧ರಲ್ಲಿ ಮೈಸೂರು ಅರಸರಿಗೆ ಹಸ್ತಾಂತರಗೊಂಡ ಮೇಲೂ ಬ್ರಿಟಿಷ್ ನಾಣ್ಯಗಳು ಅಧಿಕೃತ ನಾಣ್ಯಗಳಾಗಿ ಮುಂದುವರಿದವು. ಮುಂದೆ ೧೯೧೮ರಲ್ಲಿ ನೋಟುಗಳ ಚಲಾವಣೆಯು ಆರಂಭವಾಯಿತು. ಅಲ್ಲದೇ ಬ್ರಿಟಿಷರು ಚಲಾವಣೆಗೆ ತಂದಿದ್ದ ಕಾಸು, ಮೂರು (೧/೪ ಆಣೆ), ಆರು (ಅರ್ಧ ಆಣೆ) ಕಾಸು ಮೌಲ್ಯದ ತಾಮ್ರದ ನಾಣ್ಯಗಳು, ಚವಿ (ಎರಡು) ಹಾಗೂ ಪಾವಲಿ (ನಾಲು) ಆಣೆಯ ನಿಕಲ್ ನಾಣ್ಯಗಳು ಹಾಗೂ (ಅರ್ಧ ಹಾಗೂ ಒಂದು ರೂಪಾಯಿಯು) ಬೆಳ್ಳಿಯು ರೂಪಾಯಿಗಳು ಚಲಾವಣೆಯಲ್ಲಿದ್ದವು. ಸ್ವಾತಂತ್ರ್ಯಾನಂತರ ಭಾರತ ಸರ್ಕಾರದ ಲಾಂಛನದೊಂದಿಗೆ ನಾಣ್ಯ ಹಾಗೂ ನೋಟುಗಳು ಚಲಾವಣೆಗೆ ಬಂದವು. ಆದರೂ ಹದಿನಾರು ಆಣೆಯ ರೂಪಾಯಿ ಹಾಗೂ ೧೨ ಕಾಸಿನ ಆಣೆಯು ಮುಂದುವರಿಯಿತು. ಮುಂದೆ ೧೯೫೭ರಲ್ಲಿ ನಾಣ್ಯಪದ್ಧತಿಯಲ್ಲಿ ದಶಮಾಂಶ ಪದ್ಧತಿಯನ್ನು ಅಳವಡಿಸಲಾಯಿತು. ಅಲ್ಲಿಂದೀಚೆಗೆ ಭಾರತೀಯ ನಾಣ್ಯಪದ್ಧತಿ ಸಾಕಷ್ಟು ಸುಧಾರಿಸಿದ್ದು, ಇಂದು ಪೈಸೆ, ಆಣೆಗಳು ಲೆಕ್ಕಕ್ಕಿದ್ದರೂ, ಅವುಗಳ ಚಲಾವಣೆ ಕಡಿಮೆಯಾಗುತ್ತಿದ್ದು, ರೂಪಾಯಿ ನಾಣ್ಯಗಳೇ ಕನಿಷ್ಟ ಮೌಲ್ಯದ ನಾಣ್ಯವೆಂಬ ಭಾವನೆ ಜನಸಾಮಾನ್ಯರಲ್ಲಿ ಮೂಡುವಂತಾಗಿದೆ. ಒಂದು, ಎರಡು, ಐದು, ಹತ್ತು, ೨೦, ೫೦, ೧೦೦, ೫೦೦, ೧೦೦೦ ರೂ. ಮೌಲ್ಯದ ನೋಟುಗಳ ಜೊತೆಗೆ ಒಂದು, ಎರಡು, ಐದು ಹಾಗೂ ಹತ್ತು ರೂ. ಮೌಲ್ಯದ ನಾಣ್ಯಗಳೂ ಬಳಕೆಯಲ್ಲಿವೆ.



## ಸಹಕಾರ ಚಳವಳಿ

ಸಹಕಾರಿ ಸಂಘಗಳ ಕೇಂದ್ರ ಕಾಯ್ದೆ (೧೯೦೪) ಗಿಂತ ಹೆಚ್ಚು ಸುಧಾರಿತ ಮೈಸೂರು ಸಹಕಾರಿ ಸಂಘಗಳ ಕಾಯ್ದೆ (೧೯೦೫)ಯನ್ನು ಜಾರಿಗೆ ತರುವುದರೊಂದಿಗೆ ಸಂಸ್ಥಾನದಲ್ಲಿ ಸಹಕಾರಿ ಚಳವಳಿಯು ಆರಂಭವಾಯಿತು. ಈ ಕಾಯ್ದೆಯಂತೆ ತಾಲೂಕು ಕೇಂದ್ರ ನರಸೀಪುರದಲ್ಲಿ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಸಹಕಾರ ಸಂಘವು ೧೯೦೮ರಲ್ಲೂ, ಸೋಸಲೆ ಸೇವಾ ಸಹಕಾರ ಸಂಘವು ೧೯೧೧ರಲ್ಲೂ ಹೆಗ್ಗೂರು ಹಾಗೂ ತಲಕಾಡು ಸಹಕಾರ ಸಂಘಗಳು ೧೯೧೨ರಲ್ಲೂ ಆರಂಭಗೊಂಡವು. ಇವು ಸಣ್ಣ ಗಾತ್ರದ ಕೃಷಿಸಾಲ ಸಂಘಗಳಾಗಿದ್ದು, ಕೃಷಿಕರಿಗೆ ಸಾಲ ನೀಡುತ್ತಿದ್ದವು. ಆದಿ ಕರ್ನಾಟಕ ಜನಾಂಗದ ಅಭ್ಯುದಯಕ್ಕಾಗಿ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ಸಂಘಗಳಲ್ಲಿ, ಆರಂಭಿಕ ಸಂಘಗಳು ತಾಲೂಕಿನ ಶ್ರೀರಂಗರಾಜಪುರ ಹಾಗೂ ಬನ್ನೂರುಗಳಲ್ಲಿ ೧೯೧೮ರಲ್ಲೂ ಹಾಗೂ ಸೋಸಲೆಯಲ್ಲಿ ೧೯೧೯ರಲ್ಲೂ ಪ್ರಾರಂಭಗೊಂಡವು. ಅಲ್ಲದೇ ಸುಮಾರು ೧೯೨೦–೩೦ರ ದಶಕದಲ್ಲಿ ತಾಲೂಕು ಕೇಂದ್ರ ನರಸೀಪುರದಲ್ಲಿದ್ದ ಗೃಹ ನಿರ್ಮಾಣ ಸಹಕಾರ ಸಂಘವು ಗೃಹನಿರ್ಮಾಣಕ್ಕೆ ಸಾಕಷ್ಟು ನೆರವು ನೀಡಿತ್ತು.

ದೀರ್ಘಾವಧಿ ಸಾಲ ನೀಡುವ ಪ್ರಾಥಮಿಕ ಭೂಅಭಿವೃದ್ಧಿ (ಅಡಮಾನ) ಸಹಕಾರಿ ಬ್ಯಾಂಕುಗಳು ೧೯೩೦ರ ದಶಕದಲ್ಲಿ ಜಿಲ್ಲೆಯಲ್ಲಿ ಆರಂಭಗೊಂಡ ಬೆನ್ನಲ್ಲೇ

ನರಸೀಪುರದಲ್ಲೂ ಪ್ರಾಥಮಿಕ ಭೂಅಭಿವೃದ್ಧಿ ಬ್ಯಾಂಕು ೧೯೩೭ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದು ಭೂಅಭಿವೃದ್ಧಿಗೆ ಸಂಬಂಧಿಸಿದಂತೆ, ರೈತರಿಗೆ ಮಧ್ಯಮ ಹಾಗೂ ದೀರ್ಘಾವಧಿ ಸಾಲ ನೀಡಲು ಮುಂದಾಯಿತು. ಕ್ರಮೇಣ ಸಹಕಾರ ಚಳವಳಿಯು ವೃದ್ಧಿಸಲಾರಂಭಿಸಿದ ಪರಿಣಾಮವಾಗಿ ೧೯೪೬ರ ವೇಳೆಗೆ ತಾಲೂಕಿನಲ್ಲಿ ೪೫ ವಿವಿಧ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದವು. ಏತನ್ಮಧ್ಯೆ ಮೈಸೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿ (೧೯೫೫)ನ ಪ್ರಥಮ ಶಾಖೆಯು ತಾಲೂಕು ಕೇಂದ್ರ ನರಸೀಪುರದಲ್ಲಿ ೧೯೬೦ರಲ್ಲಿ ಆರಂಭವಾಯಿತು. ಇದರ ಆರಂಭದೊಂದಿಗೆ ಕೃಷಿ ಹಾಗೂ ಕೃಷಿಯೇತರ ಸಾಲ ಸಂಘಗಳಿಗೆ ಚೈತನ್ಯ ದೊರೆತು ತಾಲೂಕಿನಲ್ಲಿ ಸಹಕಾರ ಚಳುವಳಿಗೆ ಹುರುಪುಂಟಾಗಿ ಸಹಕಾರ ಸಂಘಗಳ ಸದಸ್ಯರಿಗೆ ಕೃಷಿಗಾಗಿ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲವು ಸರಳವಾಗಿ ಲಭಿಸುವಂತಾಯಿತು. ಸರ್ಕಾರದ ಬಡತನ ನಿರ್ಮೂಲನಾ ಯೋಜನೆಗೆ ಪೂರಕವಾಗಿ ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು, ಸರ್ಕಾರದೊಂದಿಗೆ ಈ ಬ್ಯಾಂಕೂ ಸೇರಿದಂತೆ, ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳೂ ಸಹಕರಿಸಿದ್ದವು.

ಗ್ರಾಮೀಣ ಮಟ್ಟದಲ್ಲಿ ಮಹತ್ವದ ಪಾತ್ರ ವಹಿಸುವ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಯಶಸ್ಸು, ಸಹಕಾರ ಚಳವಳಿಯನ್ನು ಪರಿಣಾಮಕಾರಿಯಾಗಿ ರೈತರಿಗೆ ತಲುಪಿಸುವಲ್ಲಿ ಸಹಕಾರಿಯಾಗಿದೆ. ತತ್ಪರಿಣಾಮವಾಗಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳನ್ನು ೧೯೭೬ರಲ್ಲಿ ಪುನರ್ ಸಂಘಟಿಸಿದಾಗ ಅವುಗಳ ಸಂಖ್ಯೆಯೂ ಕಡಿಮೆಯಾಯಿತು. ಅದರಂತೆ ೧೯೮೬ರ ವೇಳೆಗೆ ತಾಲೂಕಿನಲ್ಲಿ ೨೭ ಪ್ರಾಥಮಿಕ ಕೃಷಿ ಸಾಲ ಸಹಕಾರಿ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದವು. ೨೦೦೮ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಇವುಗಳ ಸಂಖ್ಯೆ ೨೪ಕ್ಕೆ ಇಳಿದು, ೨೬,೮೫೦ ಸದಸ್ಯರನ್ನು ಹೊಂದಿದ್ದವು. ಅಲ್ಲದೆ ಈ ಕೃಷಿ ಸಹಕಾರಿ ಸಂಘಗಳಿಂದ ಒಟ್ಟು ೧೧೦೪.೫೭ ಲಕ್ಷ ರೂ. ಅಲ್ಪಾವಧಿ, ೧೮.೬೫ ಲಕ್ಷ ರೂ. ಮಧ್ಯಮಾವಧಿ) ಹಾಗೂ ೧೦೨.೮೪ ಲಕ್ಷ ರೂ. ದೀರ್ಘಾವಧಿ ಸಾಲವನ್ನು ಕೃಷಿಕರಿಗೆ ನೀಡಲಾಗಿತ್ತು.

ರೇಷ್ಮೆಕೃಷಿಯ ಅಭಿವೃದ್ಧಿಗೆ ಪೂರಕವಾಗಿ ರೇಷ್ಮೆ ಹಾಗೂ ರೈತ ಸೇವಾ ಸಹಕಾರಿ ಸಂಘಗಳನ್ನು ಆರಂಭಿಸಲಾಗಿದ್ದು, ಅವುಗಳ ಅಭಿವೃದ್ಧಿಗೆ ಒಳ್ಳೆಯ ಉತ್ತೇಜನವನ್ನು ವಿಶ್ವಬ್ಯಾಂಕ್ ಯೋಜನೆಯಡಿ ನೀಡಲಾಯಿತು. ಆರ್ಥಿಕ ಅಗತ್ಯಕ್ಕನುಗುಣವಾಗಿ ಇವುಗಳಲ್ಲಿ ಕೆಲವನ್ನು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ವಾಣಿಜ್ಯ ಬ್ಯಾಂಕುಗಳಿಗೆ ವಹಿಸಲಾಗಿದೆ. ತಾಲೂಕು ಕೇಂದ್ರ ನರಸೀಪುರದಲ್ಲಿ ರೇಷ್ಮೆ ನೂಲು ಸಹಕಾರ ಸಂಘವು ಕಾರ್ಯ ನಿರ್ವಹಿಸುತ್ತಿದೆ.

**ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕು :** ಹಿಂದೆ ಭೂಅಡಮಾನ ಬ್ಯಾಂಕು ಅಥವಾ ಭೂ ಅಭಿವೃದ್ಧಿ ಬ್ಯಾಂಕು ಎಂದೇ ಕರೆಯಲ್ಪಡುತ್ತಿದ್ದ ಇದಕ್ಕೆ ೧೯೮೫ರಲ್ಲಿ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಎಂದು ಪುನರ್ ನಾಮಕರಣ ಮಾಡಲಾಯಿತು.



ಅದರಂತೆ ತಾಲೂಕಿನಲ್ಲಿ ಇರುವ ಈ ಬ್ಯಾಂಕು, ಕೃಷಿಕರಿಗೆ ಕೇಂದ್ರೀಯ ಆರ್ಥಿಕ ಸಂಸ್ಥೆಯಿಂದ ಮಧ್ಯಮ ಹಾಗೂ ದೀರ್ಘಾವಧಿ ಸಾಲಗಳನ್ನು ಒದಗಿಸುವ ಮಧ್ಯವರ್ತಿಯಾಗಿತ್ತು. ಆದರೆ ನಬಾರ್ಡ್‌ನ ನಿರ್ದೇಶನದಂತೆ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದ ಸಾಲ ನೀಡುವುದರ ಜೊತೆಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಸಣ್ಣ ಹಾಗೂ ಮಧ್ಯಮ ವರ್ಗದ ರೈತರಿಗೆ ಆದ್ಯತೆಯ ಮೇಲೆ ಸಾಲವನ್ನು ಈ ಬ್ಯಾಂಕು ನೀಡಲಾರಂಭಿಸಿತು. ಅದರಂತೆ ೨೦೦೬ರ ಮಾರ್ಚ್ ಅಂತ್ಯಕ್ಕೆ ಈ ಬ್ಯಾಂಕಿನಿಂದ ೩೫೫ ಮಂದಿ ಒಟ್ಟು ೧೨೪.೨೫ ಲಕ್ಷ ರೂ.ಗಳನ್ನು ಸಾಲವಾಗಿ ಪಡೆದಿದ್ದರು. ಅಲ್ಲದೆ ತಾಲೂಕಿನಲ್ಲಿದ್ದ ಇತರೆ ಸಹಕಾರಿ ಬ್ಯಾಂಕುಗಳಿಂದ ೨೦೦೯ರ ಮಾರ್ಚ್ ಅಂತ್ಯಕ್ಕೆ ೪೧೫೦ ಮಂದಿಗೆ ೯೩೦.೬೫ ಲಕ್ಷ ರೂ.ಗಳನ್ನು ಸಾಲವಾಗಿ ನೀಡಲಾಗಿತ್ತು.

**ಮಾರಾಟ ಸಂಘಗಳು :** ಕೃಷಿ ಸಾಲವನ್ನು ಕೃಷಿ ಉತ್ಪನ್ನ ಮಾರಾಟದೊಂದಿಗೆ ಜೋಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದರ ಜೊತೆಗೆ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ಒದಗಿಸುವಲ್ಲಿ ತಾಲೂಕು ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆ ಸಂಘವು ರೈತರಿಗೆ ತಾಲೂಕು ಮಟ್ಟದಲ್ಲಿ ನೆರವಾಗುತ್ತದೆ. ಇದರ ಜೊತೆಗೆ ಹಣ್ಣು ತರಕಾರಿ ಹಾಗೂ ಬೆಳೆಗಳ ಮಾರಾಟಕ್ಕೆಂದೂ ವಿಶೇಷ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳಿವೆ. ಕೃಷಿಯೇತರ ಸಾಲ ಸಂಘಗಳು ತಾಲೂಕಿನಲ್ಲೂ ಕಾರ್ಯ ನಿರ್ವಹಿಸುತ್ತಿವೆ.

**ಹಾಲು ಉತ್ಪಾದಕರ ಸಹಕಾರ ಸಂಘ :** ಹೈನುಗಾರಿಕೆ ಬಹು ಹಿಂದಿನಿಂದಲೂ ಕೃಷಿಕರ ಉಪಕಸುಬಾಗಿದ್ದು, ಗ್ರಾಮೀಣರು, ಹಾಲು ಮೊಸರು, ಬೆಣ್ಣೆ ಮುಂತಾದವನ್ನು ಸಮೀಪದ ದೊಡ್ಡ ಊರು ಪಟ್ಟಣಗಳಿಗೆ ಹೋಗಿ ಮಾರಾಟ ಮಾಡುವುದು ತೀರಾ ಸಾಮಾನ್ಯವಾಗಿತ್ತು. ವಿಶ್ವಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ಹಾಲು ಒಕ್ಕೂಟವು ಜಿಲ್ಲೆಯಲ್ಲಿ ಆರಂಭಿಸಿ ಕ್ಷೀರಕ್ರಾಂತಿಯನ್ನು ಸಾಧಿಸುವಲ್ಲಿ ಹಾಲು ಉತ್ಪಾದಕರ ಸಂಘಗಳ ಪಾತ್ರ ಹಿರಿದಾಗಿತ್ತು. ಈ ಹಾಲು ಉತ್ಪಾದಕರ ಸಹಕಾರ ಸಂಘಗಳ ಚಟುವಟಿಕೆಗಳಲ್ಲಿ ಸಮನ್ವಯ ಸಾಧಿಸಲು ಪೂರಕ ಸೌಕರ್ಯ ಕಲ್ಪಿಸಿಕೊಡುವ ಸಲುವಾಗಿ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟವನ್ನು ೧೯೭೬ರಲ್ಲಿ ಸ್ಥಾಪಿಸಲಾಯಿತು. ಅದರಂತೆ ತಾಲೂಕಿನಲ್ಲೂ ೨೦೦೮ರ ಮಾರ್ಚ್ ಅಂತ್ಯಕ್ಕೆ ೯೫ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದು, ೨೫,೮೨೫ ಸದಸ್ಯರನ್ನು ಹೊಂದಿದ್ದವು.

**ಕೃಷಿಯೇತರ ಸಹಕಾರಿ ಸಂಘಗಳು :** ತಾಲೂಕಿನ ಹಿರಿಯೂರಿನಲ್ಲಿ (೧೯೫೬) ಆರಂಭವಾದ ನೀರಾವರಿ ಬೇಸಾಯಗಾರರ ಸಹಕಾರ ಸಂಘವು ಜಿಲ್ಲೆಯ ಮೊದಲ ಸಂಘವಾಗಿತ್ತು. ಇದೇ ರೀತಿ ಮೀನುಗಾರರ ಸಹಕಾರ ಸಂಘ, ಮರಳು ಮಾರಾಟಗಾರರ ಸಹಕಾರ ಸಂಘಗಳು ಇಂದು ತಾಲೂಕಿನಲ್ಲಿವೆ. ೨೦೦೮ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೮೬ ಇತರೆ ಸಹಕಾರ ಸಂಘಗಳಲ್ಲಿ ೨೫,೯೬೦ ಸದಸ್ಯರು ನೋಂದಣಿಗೊಂಡಿದ್ದರು.

**ಸ್ತ್ರೀಶಕ್ತಿ ಸಂಘಗಳು:** ನಗರ–ಗ್ರಾಮೀಣ ಪ್ರದೇಶಗಳಲ್ಲಿನ ಸ್ತ್ರೀಯರನ್ನು ಸಂಘಟಿಸುವ ಮೂಲಕ, ಅವರನ್ನು ಸ್ವಾವಲಂಭಿಗಳನ್ನಾಗಿಸುವುದರ ಜೊತೆಗೆ ಅವರ ಆರ್ಥಿಕಾಭಿವೃದ್ಧಿಗೂ ಅವಕಾಶ ಕಲ್ಪಿಸುವ ಉದ್ದೇಶದಿಂದ ನಾಡಿನಾದ್ಯಂತ ಸ್ಥಳೀಯವಾಗಿ ರೂಪಿತಗೊಂಡ ಸ್ತ್ರೀಶಕ್ತಿ ಸಂಘಗಳು ತಾಲೂಕಿನಲ್ಲೂ ಕಾರ್ಯನಿರ್ವಹಿಸುತ್ತಿವೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೮೮೮ ಸ್ತ್ರೀಶಕ್ತಿ ಕೇಂದ್ರಗಳಲ್ಲಿದ್ದ ಒಟ್ಟು ೧೬೧೭೦ ಮಹಿಳೆಯರಲ್ಲಿ ೪,೭೧೮ ಜನ ಪರಿಶಿಷ್ಟ ಜಾತಿಗೂ, ೨,೪೨೫ ಪರಿಶಿಷ್ಟ ಪಂಗಡಗಳಿಗೂ ಸೇರಿದ ಮಹಿಳೆಯರಿದ್ದರು. ಈ ಸಂಘಗಳಲ್ಲಿ ಒಟ್ಟು ೩,೨೬,೨೨೦ ರೂ. ಕ್ರೋಢೀಕೃತವಾಗಿತ್ತು. ತಾಲೂಕಿನ ೬೭೩ ಸ್ತ್ರೀಶಕ್ತಿ ಕೇಂದ್ರಗಳು ಬ್ಯಾಂಕಿನಿಂದ ೪,೩೧,೦೦೦ ರೂ. ಸಾಲವನ್ನು ಪಡೆದಿದ್ದು, ಅವುಗಳಿಗೆ ಸರ್ಕಾರ ನೀಡಿರುವ ಅವರ್ತ ನಿಧಿಯು ೪೪,೪೦೦ ರೂ.ಗಳಾಗಿತ್ತು.

**ವಾಣಿಜ್ಯ ಮತ್ತು ವ್ಯಾಪಾರ :** ಬಹುಹಿಂದಿನಿಂದಲೂ ವಾಣಿಜ್ಯ ವ್ಯಾಪಾರ ಚಟುವಟಿಕೆಗಳು ತಾಲೂಕಿನಲ್ಲಿ ಕ್ರಿಯಾಶೀಲವಾಗಿದ್ದ ಅಂಶವನ್ನು ಅನೇಕ ಶಾಸನಗಳು ಸಾರುತ್ತವೆ. ತಲಕಾಡು, ಬನ್ನೂರು, ಸೋಮನಾಥಪುರಗಳು ವ್ಯಾಪಾರಿ ಕೇಂದ್ರಗಳೂ ಆಗಿದ್ದ ಅಂಶ ಅಲ್ಲಿಯ ಶಾಸನಗಳಿಂದ ವೇದ್ಯವಾಗುತ್ತದೆ. ಅಯ್ಯಾವೊಳೆ ೫೦೦ ವರ್ತಕ ಸಂಘದ ಉಲ್ಲೇಖ ತಾಲೂಕಿನ ಶಾಸನದಲ್ಲಿ ಕಂಡುಬರುತ್ತದೆ. ಮೂಗೂರಿನ ೧೨೭೭ರ ಶಾಸನದಿಂದ ಊರ ಗೌಡ, ಪಟ್ಟಣಶೆಟ್ಟಿಗಳು ಒಂದಾಗಿ, ವಾರದ ಸಂತೆ ಆರಂಭಿಸಿ, ಹೊಸಊರಲ್ಲಿ ನೆಲೆಸುವವರಿಗೆ ಮನೆಸುಂಕದಲ್ಲಿ ರಿಯಾಯಿತಿ ನೀಡಿದ ಅಂಶ ಗೊತ್ತಾಗುತ್ತದೆ. ತಾಲೂಕಿನ ಶಾಸನಗಳಲ್ಲಿ ಸಂತೆಗೆ ಬರುತ್ತಿದ್ದ ವಸ್ತುಗಳಿಗೆ ವಿಧಿಸುತ್ತಿದ್ದ ಸುಂಕ, ಮಾರ್ಗದಾಯ, ಉಭಯ ಮಾರ್ಗಾದಾಯ, ಒಳವಾರು–ಹೊರವಾರು ಮುಂತಾದ ತೆರಿಗೆಗಳ ಉಲ್ಲೇಖವಿದೆ. ತಲಕಾಡು ನಗರದ ನಗರತ್ತರ್–೨೫, ಸಮಿತಿಯು ಪಟ್ಟಣಶೆಟ್ಟಿ (ಪಟ್ಟಣವಸಂತ) ಎಂಬ ಮುಖ್ಯಸ್ಥನನ್ನು ಹೊಂದಿದ್ದ ಅಂಶ ತಲಕಾಡಿನ ಶಾಸನದಿಂದ ಸ್ಪಷ್ಟವಾಗುತ್ತದೆ. ವಿಜಯನಗರ–ಮೈಸೂರು ಅರಸರ ಕಾಲಕ್ಕೆ ಚಿದರಹಳ್ಳಿ ಸೇರಿದಂತೆ ೩೨ ಊರುಗಳು ತಲಕಾಡು ನಾಡಿನಲ್ಲಿದ್ದ ಅಂಶ ಚಿದರಹಳ್ಳಿ ಶಾಸನದಿಂದ ಮನವರಿಕೆಯಾಗುತ್ತದೆ. ಹೈದರ್–ಟಿಪ್ಪು ಆಳ್ವಿಕೆಯಲ್ಲಿ ವಾಣಿಜ್ಯ ವ್ಯಾಪಾರಕ್ಕೆ ವಿಶೇಷ ಗಮನ ನೀಡಲಾಯಿತು. ಪ್ರಮುಖ ಸ್ಥಳಗಳಲ್ಲಿ ಸರ್ಕಾರಿ ಮಾರಾಟ ಮಳಿಗೆಗಳನ್ನು ತೆರೆಯಲಾಯಿತು. ಕಮೀಷನರುಗಳ ಕಾಲದಲ್ಲಿ ವಸ್ತುಗಳ ಮೇಲಿನ ರಹದಾರಿ ಸುಂಕವನ್ನು ರದ್ದು ಮಾಡಲಾಯಿತು. ಸುಮಾರು ೧೮೬೦ರಲ್ಲಿ ತೆರೆಯಲ್ಪಟ್ಟ ಕೊಳ್ಳೇಗಾಲ–ಸತ್ಯಮಂಗಲ ಹೆದ್ದಾರಿಯಿಂದಾಗಿ, ಈ ಭಾಗದಲ್ಲೂ ವ್ಯಾಪಾರ ಚಟುವಟಿಕೆಯು ಅಧಿಕಗೊಂಡಿತು. ಸುಮಾರು ೧೮೭೬–೮೦ರಲ್ಲಿ ಚಾಲ್ತಿಯಲ್ಲಿದ್ದ 'ಸಾಯರ್' ಸುಂಕಕ್ಕೆ ಬದಲು 'ಆಕ್ಟ್ರಾಯ್' ಶುಲ್ಕವನ್ನು ವಿಧಿಸುವುದು ಆರಂಭವಾಯಿತು.

ಬತ್ತ–ಕಬ್ಬುಗಳು ತಾಲೂಕಿನಲ್ಲಿ ಪ್ರಮುಖ ಬೆಳೆಗಳಾಗಿದ್ದು, ಅಕ್ಕಿ ಗಿರಣಿ ಹಾಗೂ ಆಲೆಮನೆಗಳು ಗಣನೀಯ ಪ್ರಮಾಣದಲ್ಲಿ ಆರಂಭಗೊಳ್ಳಲಾರಂಭಿಸಿದವು. ರೇಷ್ಮೆ ಕೃಷಿಯಿಂದಾಗಿ ರೇಷ್ಮೆಯು ಕೈಗಾರಿಕೆಯಾಗಿ ಪ್ರಗತಿ ಸಾಧಿಸಿತು. ೧೯೮೦ರ ದಶಕದಲ್ಲಿ



ತಾಲೂಕು ಕೇಂದ್ರ ನರಸೀಪುರ ಪಟ್ಟಣದಿಂದ ಕಚ್ಚಾರೇಷ್ಮೆ, ಖಾದ್ಯತೈಲ, ಹಾಗೂ ರೇಷ್ಮೆ ನೂಲು ರಫ್ತಾದರೆ, ರೇಷ್ಮೆಗೂಡು, ನೆಲಗಡಲೆ, ಹಾಗೂ ದವಸಧಾನ್ಯಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಅದೇ ಬನ್ನೂರಿನಿಂದ ಅಕ್ಕಿ, ಮರಮುಟ್ಟು, ಹಾಗೂ ಬೆಲ್ಲ ರಫ್ತಾದರೆ, ಬತ್ತ, ರಸಾಯನಿಕ ಗೊಬ್ಬರ ಹಾಗೂ ಬಟ್ಟೆ ಪ್ರಮುಖ ಆಮದು ವಸ್ತುಗಳಾಗಿದ್ದವು. ಇದೇ ರೀತಿ ತಲಕಾಡು ಕೂಡ ಅಕ್ಕಿ ಹಾಗೂ ರೇಷ್ಮೆ ವಹಿವಾಟಿಗೆ ಹೆಸರಾಗಿದೆ. ತಾಲೂಕಿನಲ್ಲಿ ೧೯೮೬ರ ವೇಳೆಗೆ ೨೦೧೯ ಜನರು ವಾಣಿಜ್ಯ ಚಟುವಟಿಕೆಯಲ್ಲಿ ನಿರತರಾಗಿದ್ದು, ಇವರಲ್ಲಿದ್ದ ೨೩೬ ಮಹಿಳೆಯರಲ್ಲಿ ೧೭೮ ಮಂದಿ ಗ್ರಾಮೀಣ ಭಾಗದಲ್ಲೂ ಉಳಿದ ೫೮ ಮಂದಿ ನಗರ ಪ್ರದೇಶದಲ್ಲೂ ಇದ್ದರೆಂದು ತಿಳಿದುಬರುತ್ತದೆ. ನಂತರದಲ್ಲಿ ಸಾಕಷ್ಟು ಬೆಳವಣಿಗೆ ಈ ರಂಗದಲ್ಲಿ ಆಗಿದೆ.

**ನಿಯಂತ್ರಿತ ಮಾರುಕಟ್ಟೆ :** ರೈತರಿಗೆ ಯೋಗ್ಯ ಹಾಗೂ ಸ್ಪರ್ಧಾತ್ಮಕ ಬೆಲೆಯನ್ನು ದೊರಕಿಸುವ ಸಲುವಾಗಿ ಸರ್ಕಾರವು ನಿಯಂತ್ರಿತ ಮಾರುಕಟ್ಟೆಗಳನ್ನು ೧೯೩೯ರ ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಯನ್ವಯ ೧೯೪೭ರಲ್ಲಿ ಆರಂಭಿಸಿತು. ಮುಂದೆ ಏಕೀಕರಣದ ನಂತರ ಹೆಚ್ಚು ಸಮಗ್ರವೂ ಏಕ ಪ್ರಕಾರವೂ ಆದ ಕೃಷಿ ಉತ್ಪನ್ನ ಮಾರಾಟ ನೀತಿಯನ್ನು ಒಳಗೊಂಡ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಯನ್ನು (೧೯೬೬) ೧೯೬೮ರಲ್ಲಿ ಜಾರಿಗೊಳಿಸಿತು. ಅದರಂತೆ ಕೃಷಿ ಉತ್ಪನ್ನ ಉಪ ಮಾರುಕಟ್ಟೆಗಳು ನರಸೀಪುರ ತಾಲೂಕಿನ ಬನ್ನೂರು (೧೯೭೧) ಹಾಗೂ ನರಸೀಪುರ (೧೯೭೮)ಗಳಲ್ಲಿ ಸ್ಥಾಪಿಸಲ್ಪಟ್ಟವು. ಕ್ರಮೇಣ ಈ ಎರಡು ಉಪಮಾರುಕಟ್ಟೆಗಳಲ್ಲಿ ನರಸೀಪುರವನ್ನು ಮುಖ್ಯ ಮಾರುಕಟ್ಟೆಯ ದರ್ಜೆಗೇರಿಸಲಾಗಿದ್ದು, ಇನ್ನೊಂದು ಉಪಮಾರುಕಟ್ಟೆಯಾಗಿಯೇ ಮುಂದುವರಿದಿದೆ. ೨೦೦೭–೦೮ನೇ ಸಾಲಿನಲ್ಲಿ ಈ ಮಾರುಕಟ್ಟೆಗಳಲ್ಲಿ ಒಟ್ಟು ೧೩೩.೭೦ ಕೋಟಿ ರೂ.ಗಳ ವಹಿವಾಟು ನಡೆದಿತ್ತು.

**ಸಂತೆಗಳು :** ಬಹುಹಿಂದಿನಿಂದಲೂ ವಾರದ ಸಂತೆಗಳು, ಆಯಾ ಪ್ರದೇಶದ ನೆರೆಹೊರೆಯ ಸಣ್ಣ ಗ್ರಾಮಗಳ ರೈತರ ಉತ್ಪನ್ನಗಳಿಗೆ, ಕುಶಲಕರ್ಮಿಗಳ ಉತ್ಪಾದಿತ ವಸ್ತುಗಳಿಗೆ ವರ್ತಕರ ವ್ಯಾಪಾರಕ್ಕೆ ವಸ್ತುವಿನಿಮಯ ಮಾರಾಟಕೇಂದ್ರಗಳಾಗಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿರುತ್ತಿದ್ದವು. ತಾಲೂಕು ಕೇಂದ್ರ ನರಸೀಪುರದಲ್ಲಿ ಸೋಮವಾರದಂದು ನಡೆಯುವ ಸಂತೆಯೂ ಸೇರಿದಂತೆ ತಾಲೂಕಿನ ತಲಕಾಡು ಬನ್ನೂರು, ಸೋಸಲೆ, ಸೋಮನಾಥಪುರ, ಮೂಗೂರು ಮುಂತಾದೆಡೆಗಳಲ್ಲಿ ಸಂತೆ ನಡೆಯುತ್ತಿದ್ದುದ್ದಕ್ಕೆ ಶಾಸನಾಧಾರಗಳಿವೆ. ಮೂಗೂರಿನಲ್ಲಿ ಸಂತೆಯನ್ನು ಆರಂಭಿಸಿದ (೧೨೭೭) ಉಲ್ಲೇಖ ಶಾಸನವೊಂದರಲ್ಲಿದೆ. ಅದರಲ್ಲೂ ನರಸೀಪುರದಲ್ಲಿ ಸಂತೆಯ ದಿನದಂದು, ದನಗಳ ಸಂತೆಯೂ ನೆರೆಯುತ್ತದೆ. ಅಲ್ಲದೇ ಮುಡುಕುತೊರೆ, ಬನ್ನೂರು ಹಾಗೂ ತಲಕಾಡುಗಳಲ್ಲಿ ಜರುಗುವ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ದನಗಳ ಮಾರಾಟವೂ ಬಿರುಸಿನಿಂದ ಜರುಗುತ್ತದೆ. ೨೦೦೮ರ ಮಾರ್ಚ್ ಅಂತ್ಯಕ್ಕೆ ಮನರಂಜನೆಯನ್ನು ನೀಡುವ ಐದು ಶಾಶ್ವತ ಚಿತ್ರಮಂದಿರ (ನರಸೀಪುರ (೨), ಬನ್ನೂರು, ತಲಕಾಡು, ಮೂಗೂರು) ಹಾಗೂ ಮೂರು ಸಂಚಾರಿ ಚಿತ್ರಮಂದಿರಗಳು ತಾಲೂಕಿನಲ್ಲಿದ್ದವು.

**ಸಾರ್ವಜನಿಕ ಪಡಿತರ ವಿತರಣೆ :** ಈ ವ್ಯವಸ್ಥೆಯು ೧೯೪೪ರಷ್ಟು ಹಿಂದೆಯೇ ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದರೂ, ೧೯೪೮ರಲ್ಲಿ ಅದನ್ನು ರದ್ದುಗೊಳಿಸಲಾಯಿತು. ಆದರೆ ಇದರ ಅಗತ್ಯ ೧೯೬೫ರಲ್ಲಿ ಉದ್ಭವಿಸಿದಾಗ ಆಯ್ದ ನಗರಗಳಲ್ಲಿ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸರ್ಕಾರದಿಂದ ಮಾನ್ಯತೆ ಪಡೆದ ನ್ಯಾಯಬೆಲೆ ಅಂಗಡಿಗಳ ಮೂಲಕ ಆರಂಭಿಸಲಾಯಿತು. ಇದನ್ನು ೧೯೭೮ರ ವೇಳೆಗೆ ೪೦,೦೦೦ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಪಟ್ಟಣಗಳಿಗೆ ವಿಸ್ತರಿಸಲಾಯಿತು. ಇದನ್ನು ಕ್ರಮೇಣ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಲಾಯಿತು. ೨೦೦೮ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೧೨೯ ನ್ಯಾಯಬೆಲೆ ಅಂಗಡಿಗಳಿದ್ದು, ೬,೯೬೮ ಅಂತ್ಯೋದಯ ಪಡಿತರ ಚೀಟಿ ಹಾಗೂ ೬೯,೯೪೭ (೪೮,೪೮೧ ಬಿ.ಪಿ.ಎಲ್ + ೨೧,೪೬೬ ಎ.ಪಿ.ಎಲ್) ತಾತ್ಕಾಲಿಕ ಪಡಿತರ ಚೀಟಿಗಳನ್ನು ಹೊಂದಿದ್ದ ಕುಟುಂಬಗಳು ತಾಲೂಕಿನಲ್ಲಿದ್ದು ೧೨,೨೮೯ ಕುಟುಂಬಗಳು ಹೊಸ ಪಡಿತರ ಚೀಟಿಗಾಗಿ ಕೋರಿಕೆ ಸಲ್ಲಿಸಿದ್ದವು.

**ಉಗ್ರಾಣ ವ್ಯವಸ್ಥೆ :** ಸಾಂಪ್ರದಾಯಕವಾಗಿ ರೈತರು ಬೆಳೆದ ಹೆಚ್ಚುವರಿ ಬೆಳೆಯನ್ನು 'ಕಣಜ' 'ಹಗೇವು' ಮುಂತಾದೆಡೆಗಳಲ್ಲಿ ಶೇಖರಿಸಿಡುತ್ತಾರೆ. ಆದರೆ ಇವು ಹಾಳಾಗುವ ಸಾಧ್ಯತೆಯಿರುವುದರಿಂದ ರೈತರ ಅನುಕೂಲಕ್ಕಾಗಿ ಉಗ್ರಾಣಗಳ ನಿರ್ಮಾಣಕ್ಕೆ ಸರ್ಕಾರ ೧೯೬೨ರಲ್ಲಿ ಮುಂದಾಯಿತು. ಅದರಂತೆ ರಾಜ್ಯ ಉಗ್ರಾಣ ನಿಗಮವು ತಾಲೂಕು ಕೇಂದ್ರ ನರಸೀಪುರದಲ್ಲಿ ೧೦೦೦ ಟನ್ ಸಾಮರ್ಥ್ಯದ ಸರ್ಕಾರಿ ಉಗ್ರಾಣ ಕೋಠಿಯನ್ನು ೧೯೬೬–೬೭ರಲ್ಲಿ ಸ್ವತಂತ್ರವಾಗಿ ಆರಂಭಿಸಿತು. ಅಲ್ಲದೇ ೧೯೮೭ರ ವೇಳೆಗೆ ೬೨೯ ಟನ್ ಸಾಮರ್ಥ್ಯದ ಇನ್ನೊಂದು ಉಗ್ರಾಣವನ್ನು ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸುತ್ತಿತ್ತು. ತತ್ಪರಿಣಾಮವಾಗಿ ಇಂದು ಈ ಉಗಮವು ದಾಸ್ತಾನುದಾರರಿಗೆ ಸಂಗ್ರಹಣೆ ಸೌಲಭ್ಯವನ್ನು ಒದಗಿಸುವುದರ ಜೊತೆಗೆ ದಾಸ್ತಾನುಗಳಿಗೆ ಧೂಮೋಪಚಾರ, ಔಷಧ ಸಿಂಪಡಣೆ ಸೌಲಭ್ಯವನ್ನೂ ನೀಡುತ್ತಿದ್ದು, ರೈತರು, ದಾಸ್ತಾನುದಾರರು, ಉಗ್ರಾಣ ರಸೀತಿಯ ಆಧಾರದ ಮೇಲೆ ಬ್ಯಾಂಕುಗಳಿಂದ ಬೆಳೆ ಸಾಲವನ್ನು ಪಡೆಯಬಹುದಾಗಿದೆ. ೨೦೦೬ರ ವೇಳೆಗೆ ಬನ್ನೂರಿನಲ್ಲೂ ಉಗ್ರಾಣವನ್ನು ಆರಂಭಿಸಲಾಗಿದೆ.

**ತೂಕ ಮತ್ತು ಅಳತೆ :** ನಾಣ್ಯ ಪದ್ಧತಿಯಂತೆ ತೂಕ ಮತ್ತು ಅಳತೆಯಲ್ಲೂ ಪ್ರಾದೇಶಿಕ ವ್ಯತ್ಯಾಸವಿತ್ತು. ತಾಲೂಕಿನ ಪ್ರಾಚೀನ ಶಾಸನಗಳಲ್ಲಿ ಖಂಡುಗ, ಕೊಳಗಗಳನ್ನು ದವಸ ಧಾನ್ಯಗಳನ್ನು ಅಳೆಯಲೂ; ವೀಸೆ, ಸೇರು, ಹಾಗೂ ಸೊಲಿಗೆಯನ್ನು ದ್ರವ್ಯವಸ್ತುಗಳನ್ನು ಅಳೆಯಲು ಬಳಸುತ್ತಿದ್ದುದರ ಬಗ್ಗೆ ಹಲವಾರು ಉಲ್ಲೇಖ ಲಭಿಸುತ್ತದೆ. ಭೂಮಿಯನ್ನು ಅಳೆಯಲು ಗೇಣು, ಪಾದಳತೆಗಳು ರೂಢಿಯಲ್ಲಿದ್ದು, ಮೂಗೂರಿನ ಹೊಯ್ಸಳ ಶಾಸನವೊಂದು ಭೂಮಾಪನಕ್ಕೆ ಬಳಸುತ್ತಿದ್ದ ಅಳತೆ ಕೋಲನ್ನು ಉಲ್ಲೇಖಿಸುತ್ತಿದ್ದು, ಶಾಸನದ ಕೆಳಗೆ, ಗೇಣಿನ ಅಳತೆಗೋಲಿನ ಎರಡು ತುದಿಗಳನ್ನು ಗುರುತು ಮಾಡಿರುವ ಅಂಶ ಉಲ್ಲೇಖಾರ್ಹವಾಗಿದೆ. ಮನೆ, ಹಿತ್ತಿಲು, ಹಾಗೂ ನಿವೇಶನಗಳನ್ನು ಅಳೆಯಲು ಹಸ್ತ, ಮೊಳ, ಮಾರುಗಳು ಬಳಕೆಯಲ್ಲಿದ್ದು, ಇವು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಿರುತ್ತಿತ್ತು.



ಇದನ್ನು ಮನಗಂಡ ಚಿಕ್ಕದೇವರಾಜ ಒಡೆಯರು ತಮ್ಮ ಸಂಸ್ಥಾನದ ೮೪ ಗಡಿಗಳಲ್ಲೂ ಏಕ ಪ್ರಕಾರದ ತೂಕ–ಅಳತೆಗಳನ್ನು ಜಾರಿಗೆ ತರಲು ಉದ್ದೇಶಿಸಿ, ಅವುಗಳ ಮೇಲೆ ರಾಜಮುದ್ರೆ ಒತ್ತಿ ಪ್ರತೀ ಚಾವಡಿಯಲ್ಲಿ ಇಡುವ ಮೂಲಕ ಅಂಗಡಿ ಮಾರುಕಟ್ಟೆಗಳಲ್ಲಿ ಅವನ್ನೂ ಬಳಸುವುದಕ್ಕೆ ಅವಕಾಶ ಕಲ್ಪಿಸಿದರು. ಮೂರು ಕಂಠಿರಾಯಿ ಹಣಗಳಿಗೆ ಒಂದು ದುಡ್ಡಿನ ಲೆಕ್ಕದಲ್ಲಿ ಮೇಲಿನ ತೂಕ ವ್ಯವಸ್ಥೆಯನ್ನೂ ಜಾರಿಗೆ ತರಲಾಯಿತು. ಸ್ವಾತಂತ್ರ್ಯಾನಂತರ ೧೯೫೮ರ ಕಾಯ್ದೆಯನ್ವಯ ಮೆಟ್ರಿಕ್ ಪದ್ಧತಿಯು ೧೯೬೦ರಲ್ಲಿ ರಾಜ್ಯದಾದ್ಯಂತ ಜಾರಿಗೊಳಿಸಿ ೧೯೬೨ರಿಂದ ಕಡ್ಡಾಯಗೊಳಿಸಲಾಯಿತು. ದ್ರವಮಾಪನಕ್ಕೆ ಸೇರು, ಪಾವು, ಚಟಾಕುಗಳ ಬದಲಾಗಿ ಲೀಟರ್; ವೀಸೆಗೆ ಬದಲು ಕಿಲೋಗ್ರಾಮ್, ಉದ್ದದ ಅಳತೆಗೆ ಸೆ.ಮೀ. ಮೀಟರ್‌ಗಳು ಬಳಕೆಗೆ ಬಂದವು. ಹಿಂದೆ ತೆರಿಗೆಯನ್ನೂ ದವಸ ಧಾನ್ಯರೂಪದಲ್ಲಿ ಸಂಗ್ರಹಿಸುತ್ತಿದ್ದು, ಬರಗಾಲ ಸಂದರ್ಭದಲ್ಲಿ ಜನರಿಗೆ ಬರಪರಿಹಾರವಾಗಿ ನೀಡಲಾಗುತ್ತಿತ್ತು. ತೂಕ ಅಳತೆ ಮಾಪನಗಳಲ್ಲಿ ಏಕತೆಯನ್ನೂ ನಿಖರತೆಯನ್ನೂ ಸಾಧಿಸಲು ಅವುಗಳ ಮೇಲುಸ್ತುವಾರಿಗಾಗಿ ಜಿಲ್ಲಾ ಹಾಗೂ ಉಪವಿಭಾಗ ಮಟ್ಟದಲ್ಲಿ ಕಾನೂನು ಮಾಪನ ಇಲಾಖೆಯು ಕಾರ್ಯನಿರ್ವಹಿಸುತ್ತಿದ್ದು, ನರಸೀಪುರ ತಾಲೂಕು, ಮೈಸೂರು ಉಪವಿಭಾಗದ ವ್ಯಾಪ್ತಿಗೊಳಪಟ್ಟಿದೆ.